Sri H. SIDDAVEERAPPA.—Two M. L. As, by accident, happened to be the Members of my party. But, anyway, so far the selection by the Governing Council is concerned, he Governing Council met and they made a selection of about 37 students.

Sri H. D. DEVE GOWDA.—We cannot allow these types of things to go.

Sri H. SIDDAVEERAPPA.—I agree with the sentiments of the Hon. Leader of Opposition and share his views.

ಶ್ರೀ ಕೆ. ಎಂ. ರುದ್ರಪ್ಪ.—ಈ ಗೊಂದಲ ಬಂದಿರುವ ಕಾರಣ, ಮ್ಯಾನೇಜ್‌ಮೆಂಟಿನವರನ್ನು ಏನಾದರೂ ಒಂದು ಶಿಸ್ತಿನ ಕ್ರಮಕ್ಕೆ ಒಳಪಡಿಸುವುದಕ್ಕೆ ಒಂದು ಕಾನೂನನ್ನು ಮಾಡುತ್ತೀರಾ ?

Sri H. SIDDAVEERAPPA.—I have already told the Government have to examine that whether there is a need to have any legislation to bring all these private medical colleges under control.

Continuation of Services of Candidates appointed in Health and F. P. Department

266. Sri K. R. SRINIVASULU NAYUDU (Shanthinagar).—

Will the Minister for Health be pleased to state :—

(*a*) the action taken to continue the service of candidates appointed on stipendary basis in the Department of Health and F. P. Services ;

(*b*) whether there is any scheme before the Government to give alternate appointments to these candidates ?

Sri H. SIDDAVEERAPPA (Minister for Health).—

(*a*) Government have issued orders on 17th August 1974 continuning the services of the Stipendary Doctors till the 31st December 1974.

(*b*) No.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು.—ತಮ್ಮ ಉತ್ತರದಲ್ಲಿ ಸ್ವೀಪೆಂಡರಿ ಡಾಕ್ಟರ್ಸ್‌ಗೆ ಡಿಸೆಂಬರ್ ವರೆಗೆ ಜೀವದಾನ ಮಾಡಿದ್ದೀರಿ ಎಂದು ಹೇಳಿದ್ದೀರಿ, ಒಂದು ಕಡೆ, ಪಟ್ಟಣದಲ್ಲಿ 3 ಸಾವಿರ ಜನಕ್ಕೆ ಒಬ್ಬ ಡಾಕ್ಟರು, ಗ್ರಾಮಾಂತರ ಪ್ರದೇಶದಲ್ಲಿ 18 ಸಾವಿರ ಜನಕ್ಕೆ ಒಬ್ಬ ಡಾಕ್ಟರನ್ನು ಒದಗಿಸಬೇಕು ಎಂದು ಹೇಳುತ್ತೀರಿ, ಈಗಲಾದರೂ ಈ 600-700 ಡಾಕ್ಟರುಗಳನ್ನು ಏಕೆ ರೆಗ್ಯುಲರೈಸ್ ಮಾಡಬಾರದು ?

† ಶ್ರೀ ಎಚ್. ಸಿದ್ದವೀರಪ್ಪ.—ಸರ್ಕಾರದವರು ಇದರ ಬಗ್ಗೆ ಒಂದು ತೀರ್ಮಾನ ಮಾಡಿದ್ದಾರೆ. ಇವರನ್ನು ರೆಗ್ಯುಲರೈಸ್ ಮಾಡತಕ್ಕದ್ದು ಕಾನೂನಿಗೆ ವಿರೋಧವಾಗಿದ್ದರಿಂದ, ಇವರು ಪಬ್ಲಿಕ್ ಸರ್ವೀಸ್ ಕಮಿಷನ್ ಮುಂದೆ ಹೋಗಿ, ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಇವರ ವಿಚಾರದಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಬೇಕು ಎಂದು ತೀರ್ಮಾನವನ್ನು ಸರ್ಕಾರದವರು ಮಾಡಿದ್ದಾರೆ. ಇದರ ಪ್ರಕಾರ ಅವರು ಕ್ರಮ ಕೈಗೊಳ್ಳುತ್ತಾರೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಡಾಕ್ಟರ್ಸ್ ಸರ್ವೀಸಸ್ ಅನ್ನು ಎಸೆನ್ಷಿಯಲ್ ಸರ್ವಿಸ್ ಎಂದು ಒಪ್ಪಿ ಕೊಳ್ಳುತ್ತೀರಿ. ಮಾತೆತ್ತಿದರೆ ಹಣದ ಅಭಾವವನ್ನು ಹೇಳುತ್ತೀರಿ. ನಿಮ್ಮ ನೀತಿಯಂತೆ ಒಬ್ಬ ಹಳ್ಳಿಗ ಡಾಕ್ಟರ್ ಆಗಿ ಬರಬೇಕಾದರೆ, ಸುಮಾರು 70-80 ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಅವರು ಹೊರಗಡೆ ಹೋಗಿ ಸರ್ವೆಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇವರ ಬಗ್ಗೆ ಏನಾದರೂ ಯೋಚನೆ ಮಾಡುತ್ತಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇವರನ್ನು ಹೊರಗಡೆ ಹೋಗಬೇಡಿ ಇಲ್ಲಿಯೇ ಸರ್ವೆ ಮಾಡಿ ಎಂದು ಹೇಳುತ್ತೇವೆ. ಅವರು ಹೊರಗಡೆಯೇ ಹೋಗಿ ಜೀವನ ಮಾಡುತ್ತೇವೆ ಎಂದು ಹೇಳಿದರೆ, ಸಂತೋಷ ಎಂದು ಹೇಳುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ಸ್ಪೆಷಲಿಸ್ಟ್ ಡಾಕ್ಟರ್ಸ್ ಹಳ್ಳಿಗಳಲ್ಲಿ ತಮ್ಮ ಆದೇಶದ ಮೇರೆ 300 ರೂಪಾಯಿಗಳನ್ನು ತೆಗೆದುಕೊಂಡು ಕೆಲಸಮಾಡಿ ಬಂದಿದ್ದಾರೆ ಹಾಗೆ ಖಾಲಿ ಇರುವ ಸ್ಥಾನಕ್ಕೆ ಇವರನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅವರಿಗೆ ಸ್ವಲ್ಪ ದಿವಸ, ನಾಲ್ಕೈದು ತಿಂಗಳು ಎಂದರೆ ಏಪ್ರಿಲ್ ಒಂದನೆಯ ತಾರೀಖಿನಿಂದ ಸಂಬಳ ನಿಂತಿತ್ತು. ಏಪ್ರಿಲ್ ಒಂದನೆಯ ತಾರೀಖಿನಿಂದ ಡಿಸೆಂಬರ್ ವರೆಗೆ ಅವರನ್ನು ಕಂಟಿನ್ಯೂ ಮಾಡಿದ್ದೇವೆ. ಅವರು ಪಬ್ಲಿಕ್ ಸರ್ವೀಸ್ ಕಮಿಷನ್ ಮುಂದೆ ಹೋಗಿ, ಅವರ ಮುಂದೆ ಇಂಟರ್‌ವ್ಯೂ ಪಡೆಯುವುದಕ್ಕೆ ಅವಕಾಶ ಇದೆ. ಅವರನ್ನು ಆರಿಸುವುದು ಬಿಡುವುದು ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ಸೇರಿದೆ.

ಶ್ರೀ ಟಿ. ಎಂ. ಮಂಜುನಾಥ್.—ಅವರಿಗೆ ಸಂಬಳ ಎಷ್ಟು ?

ಶ್ರೀ ಎಚ್. ಸಿದ್ದವೀರಪ್ಪ.—300 ರೂಪಾಯಿ.

ಶ್ರೀ ಎಚ್. ಡಿ. ದೇವೇಗೌಡ,— ಎಷ್ಟು ಹುದ್ದೆಗಳಿಗೆ ಭರ್ತಿಮಾಡಬೇಕೆಂದು ಪಿ. ಎಸ್. ಸಿ. ಗೆ ತಿಳಿಸಲಾಗಿದೆ ? ಕೇವಲ 250 ಹುದ್ದೆಗಳಿಗೆ ಭರ್ತಿ ಮಾಡಬೇಕೆಂದು ತಿಳಿಸಿರುವುದಾಗಿ ನಾನು ಕೇಳಿದ್ದೇನೆ. ನುಮಾರು 800 ಹುದ್ದೆಗಳು ರಾಜ್ಯದಲ್ಲಿವೆಯೆಂದು ತಿಳಿದುಬಂದಿದೆ, ಹಾಗಿರುವಾಗ 250 ಹುದ್ದೆಗಳಿವೆಯೆಂದು ಪಿ. ಎಸ್. ಸಿ. ಗೆ ತಿಳಿಸಿರುವುದು ಗೊತ್ತಾಗಿದೆ, ಅದಾದಮೇಲೆ ತಿಳಿಸಿರುವುದು ಗೊತ್ತಿಲ್ಲ. ವಿವರ ಕೊಡಿ. ಪೂರ್ಣವಾಗಿ ಇರುವ ಹುದ್ದೆಗಳನ್ನು ಪಿ. ಎಸ್. ಸಿ. ಗೆ ಭರ್ತಿಮಾಡಲು ತಿಳಿಸಲು ಇರುವ ತೊಂದರೆಯೇನು ?

ಶ್ರೀ ಎಚ್. ಸಿದ್ದವೀರಪ್ಪ.—ತೊಂದರೆಯಿಲ್ಲ ಅದನ್ನು ವೆರಿಫೈಮಾಡುತ್ತೇನೆ. ನುಮಾರು 600 ವೇಕೆನ್ಸಿಗಳಿರುವುದೆಂದು ತಿಳಿಸಿರುವುದಾಗಿ ಜ್ಞಾಪಕವಿದೆ. ಕೆಲವು ಜೆಂಪೂರೆರಿ ಹುದ್ದೆಗಳಿದ್ದವು, ಪೋಸ್ಟ್ ಗ್ರಾಜುಯೇಟ್ ನ್ಯಟೀಸ್‌ಗೆ ಪ್ರತಿ ವರ್ಷ ನುಮಾರು 250-300 ಜನರು ಹೊಗುವರು, ಆಗ ಜೆಂಪೂರೆರಿಯಾಗಿ ಯಾರನ್ನಾರೂ ಇಟ್ಟುಕೊಳ್ಳುತ್ತಿದ್ದರು. ಹಾಗೆ ಮಾಡಬೇಕಾದ ಅವಶ್ಯಕತೆಯಿಲ್ಲವೆಂದು ನಾನು ಹೇಳಿದ್ದೇನೆ. ಹಾಗೆ ಹೇಳಿ ಪಿ. ಎಸ್. ಸಿ. ಗೆ ಎರ್ಲಾ ಕಳಿಸಬೇಕೆಂದು ತಿಳಿಸುತ್ತೇನೆ. ನನಗೆ ತಿಳಿದಮಟ್ಟಿಗೆ ಜ್ಞಾಪಕವಿರ ವಂತೆ ಎಲ್ಲವನ್ನೂ ಪಿ. ಎಸ್. ಸಿ. ಗೆ ತಿಳಿಸಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಸ್ಪೆಷಲಿಸ್ಟ್ ಹುದ್ದೆಗಳಲ್ಲಿರುವವರು ಇತರ ಖಾಯಂಡಾಕ್ಟರುಗಳಿಗೆ ಸರಿಸಮಾನರೆಂದು ಪರಿಗಣಿಸಿ ಅವರಿಗೆ ಸಮಾನವಾದ ವೇತನ ಏಕೆ ಕೊಡಬಾರದು ? ಅವರನ್ನು ಪಿ. ಎಸ್. ಸಿ. ಸೆಲೆಕ್ಟ್ ಮಾಡುವಂತೆ ಏಕೆ ತಿಳಿಸಬಾರದು ?

ಶ್ರೀ ಎಚ್. ಸಿದ್ದವೀರಪ್ಪ.— ಸ್ಪೆಷಲಿಸ್ಟ್ ಡಾಕ್ಟರುಗಳನ್ನು ಕೇಂದ್ರ ಸರಕಾರದ ಯೋಜನೆಯಂತೆ ತೆಗೆದುಕೊಳ್ಳಲಾಗಿದೆ. ಅರ್ಧ ಮಿಲಿಯನ್ ಜಾಬ್ ಸ್ಕೀಂ ಪ್ರಕಾರ ಅವರನ್ನು ತೆಗೆದುಕೊಂಡಿದೆ. ಅವರನ್ನು ಮಾರ್ಚ್ 31 ರವರೆಗೆ ನೇಮಕ ಮಾಡಲಾಗಿತ್ತು, ಈಗ ಅವರ ಅವಧಿಯನ್ನು ಎಕ್ಸ್‌ಟೆಂಡ್ ಮಾಡಬೇಕು. ಅವರಿಗೆ ಸಂಬಳ ಕಡಮೆಯಿದ್ದರೆ ಅವರು ಲೋಕಲ್ ಕ್ಯಾಂಡಿಡೇಟ್ಸ್ ಇದ್ದಂತೆ, ಜೆಂಪೂರೆರಿಯಾಗಿದ್ದಾರೆ ಆದರೆ ಈಗ 4-5 ತಿಂಗಳ ಸಂಬಳ ಕೂಡಿ ಬಂದರೆ ಒಟ್ಟು ಲೆಕ್ಕ ಹಾಕಿದರೆ 600 ರೂಪಾಯಿ ಕೊಟ್ಟಹಾಗಾಗುತ್ತದೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಈಗ ತಮ್ಮ ಜವಾಬ್ದಾರಿಯನ್ನು ಪಿ. ಎಸ್. ಸಿ. ಗೆ ವಹಿಸಿರುವಂತೆ ತಮ್ಮ ಉತ್ತರದಿಂದ ಗೊತ್ತಾಗುವುದು. ಹಿಂದೆ ಬಾಂಗ್ಲಾ ದೇಶಕ್ಕೆ ಹೋದ ವರು ಮತ್ತು ಹಿಂದುಳಿದ ಪಂಗಡಗಳವರಿಗೆ ಇಷ್ಟು ರಿಸರ್ವ್ ಮಾಡಬೇಕೆಂದು ಆದೇಶ ಕೊಡುವಿರಾ?

ಶ್ರೀ ಎಚ್. ಸಿದ್ದವೀರಪ್ಪ.—ಬಾಂಗ್ಲಾ ದೇಶಕ್ಕೆ ಹೋದವರಿಗೆ ಆದ್ಯತೆ ಕೊಡಬೇಕೆಂಬುದನ್ನು ಪಿ. ಎಸ್. ಸಿ. ಅವರು ಗಮನಿಸಿ ನೋಡುವರು.

ಶ್ರೀ ಎಚ್. ಡಿ. ದೇವೇಗೌಡ.—ಅದರ ಬಗ್ಗೆ ನಾವಾಕಾರ ಹೈ ರೆಕ್ಷನ್ ಕೊಡಬೇಕು.

Sri H. SIDDAVEERAPPA.—We will also issue instructions to the P. S. C. to consider the services of those candidates who have served either in Bangla Desh or in some other places while selecting. They will be informed accordingly.

* *Distribution of Regulated Market Income*

328. Sri K. M. DORESWAMY NAIDU (Bethamangala).—

Will the Minister for Co-operation be pleased to state :—

(*a*) whether it has come to the notice of the Government that 50 per cent of the income of the Regulated Market is being distributed to the Taluk Boards and Village Panchayats ;

(*b*) if so, whether Government would take suitable steps in this behalf ?

Sri C. N. PATIL (Minister for Co-operation).—

(*a*) No.

(*b*) Does not arise.

ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು.—ಇದರ ವರಮಾನವನ್ನು ಏತಕ್ಕೆ ಖರ್ಚು ಮಾಡುವಿರಿ ?

† ಶ್ರೀ ಸಿ. ಎನ್. ಪಾಟೀಲ್.—ಮಾರ್ಕೆಟ್ ಸಮಿತಿಗಳನ್ನು ಅಭಿವೃದ್ಧಿ ಮಾಡುವುದಕ್ಕೆ.

ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು.—ರೆಗ್ಯುಲೇಟೆಡ್ ಮಾರುಕಟ್ಟೆಗೆ ವರಮಾನ ಹಳ್ಳಿಗಳಿಂದ ಬರುವುದರಿಂದ ಆ ವರಮಾನವನ್ನು ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿಗಳ ಅಭಿವೃದ್ಧಿಗೇಕೆ ಕೊಡಬಾರದು ?

ಶ್ರೀ ಸಿ. ಎನ್. ಪಾಟೀಲ್.—ಅದು ಮಾರುಕಟ್ಟೆ ಸಮಿತಿಗೇ ಸಾಲುವುದಿಲ್ಲ, ಹೆಚ್ಚು ವರಮಾನ ಬಂದಾಗ ವಿಚಾರಮಾಡೋಣ.

ಶ್ರೀ ಟಿ. ಎಂ. ಮಂಜುನಾಥ್.—ಒಂದು ರೂಪಾಯಿನಷ್ಟು ಹೆಚ್ಚು ಶುಲ್ಕ ಹಾಕಬೇಕೆಂದು ನಾವು ಪಾಕೌಟ್ ಮಾಡಿದಾಗ ತೀರ್ಮಾನವಾಗಿದೆ.— ಅದರ ಮೂಲೋದ್ದೇಶ ಮಾರ್ಕೆಟ್ ಯಾರ್ಡ್‌ನ್ನು ಡೆವಲಪ್ ಮಾಡಲು ಅದನ್ನು ಉಪಯೋಗಿಸಬೇಕೆಂಬುದು. ಇದನ್ನು ಅಭಿವೃದ್ಧಿಮಾಡಲು ವರ್ಲ್ಡ್ ಬ್ಯಾಂಕಿನಿಂದ ಸಹಾಯ ಪಡೆಯಲಾಗಿದೆ. ಈಗ ಅಭಿವೃದ್ಧಿಯಾಗಿದೆ. ಬೇಕಾದಷ್ಟು ಮಾರುಕಟ್ಟೆಗಳು ಈಗ ಡೆವಲಪ್ ಆಗಿವೆ. ಸುಮಾರು ಒಂದು ರೂಪಾಯಿ ಸುಂಕ ವಸೂಲು ಮಾಡುವುದರಿಂದ ಒಂದೊಂದು ಸಮಿತಿಗೆ ನುಮಾರು 10 ಲಕ್ಷ ರೂಪಾಯಿನಷ್ಟು ವರಮಾನ ದೊರಿತರಿಂದ ಬರುವುದು ತಿಪಟೂರನ್ನು ನೋಡಬಹುದು. ಗ್ರಾಮಾಂತರ ರಸ್ತೆ ಮುಂತಾದವನ್ನು ಮಾಡಲು ಜನರ ಕಾಂಟ್ರಿಬ್ಯೂಷನ್ ಕೇಳದೆ ಇದರಲ್ಲಿ ಉಳಿಯುವ ಹಣವನ್ನೇಕೆ ಉಪಯೋಗಮಾಡಬಾರದು ? ಹಣ ಉಳಿಯುತ್ತಿದೆ ಈಗ.

ಶ್ರೀ ಸಿ. ಎನ್. ಪಾಟೀಲ್.—ಈಗ ಸುಮಾರು 110 ಮಾರುಕಟ್ಟೆ ಸಮಿತಿಗಳಿವೆ. ಅದರಲ್ಲಿ ಹತ್ತಕ್ಕಿಂತ ಹೆಚ್ಚು ಸಮಿತಿಗಳಿಗೆ ಹಣಕಾಸಿನ ಅನುಕೂಲತೆಯಿಂದೆ. ಅಂಥ ಕಡೆ ಗಮನ ಕೊಡಬಹುದು. ಉಳಿದ 100 ಅಭಿವೃದ್ಧಿ ಆಗಬೇಕಾಗಿದೆ. ಅದಾದನಂತರ ಮುಂದೆ ಐದಾರು ವರ್ಷ